| ಪ್ರಾಸಾ | 01 |
|---|---|

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಸತ್ರ ಪ್ರಕರಣ ಸಂಖ್ಯೆ: 123/2023**

1 ರಿಂದ 3 ನೇ ಆರೋಪಿತರನ್ನು ವಿಸಿಯ ಮುಖಾಂತರ ವಿಚಾರಣೆಗೆ ಹಾಜರು ಪಡಿಸಲಾಗಿದೆ.

**ದಿನಾಂಕ: 12.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

**ಪಾಟೀ ಸವಾಲು: 1 ರಿಂದ 4 ನೇ ಆರೋಪಿತರ ಪರ ಶ್ರೀ ಎಂಜಿಎಸ್‌ಆರ್ ವಕೀಲರಿಂದ:**

**12.** ಚಾಸಾ-7 ರವರು ನಮ್ಮ ದೊಡ್ಡಮ್ಮನ ಅಣ್ಣನ ಮಗಳು. ಅವರನ್ನು ಯಾವ ಊರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ಗಂಡ ತೀರಿ ಕೊಂಡಿರುತ್ತಾರೆ. ಆ ಕಾರಣದಿಂದ ಚಾಸಾ-7 ರವರು ನಮ್ಮ ಊರಿನಲ್ಲಿ ವಾಸಿಸುತ್ತಾರೆ ಎಂದರೆ ಸರಿ. ಚಾಸಾ-7 ರವರ ಎಲ್ಲಾ ಅವಶ್ಯಕತೆಗಳನ್ನು ನನ್ನ ತಂದೆ ನೋಡಿ ಕೊಳ್ಳುತ್ತಿದ್ದರು ಎಂದರೆ ಸರಿ. ಚಾಸಾ-9 ಮತ್ತು ಚಾಸಾ-10 ರವರು ನನಗೆ ಅಣ್ಣಂದಿರಾಗಬೇಕು. ಚಾಸಾ-11 ರವರು ನಮ್ಮ ಜಾತಿಯವರು. ನಾನು ನಮ್ಮ ಊರಿನಲ್ಲಿ ಹಾಗೂ ಪಕ್ಕದ ಊರಿನಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ನಾನು ಬೆಳಿಗ್ಗೆ 9 ಗಂಟೆಗೆ ಕೆಲಸಕ್ಕೆ ಹೋಗಿ ಸಂಜೆ 3 ಗಂಟೆಗೆ ಮನೆಗೆ ವಾಪಸ್ಸು ಆಗುತ್ತೇನೆ. ಕೆಲವೊಂದು ಬಾರಿ ಕೆಲಸದಿಂದ ಸಂಜೆ 6-7 ಗಂಟೆಗೆ ವಾಪಸ್ಸು ಆಗುತ್ತೇನೆ ಎಂದರೆ ಸರಿ.

| ಪ್ರಾಸಾ | 01 |
|---|---|

13. ನಮ್ಮ ತಂದೆ ಮರಣಹೊಂದಿದ ದಿನ ನಾನು ಚಿಂತಾಮಣಿಯಿಂದ ಆಚೆ ಇರುವ ಊರಿಗೆ ಕೂಲಿ ಕೆಲಸಕ್ಕೆ ಹೋಗಿದ್ದೆನು. ಆ ದಿನ ಸಂಜೆ 6.30 ಗಂಟೆಗೆ ಮನೆಗೆ ವಾಪಸ್ಸು ಆಗಿದ್ದೆನು. ನನ್ನ ತಂದೆ ವ್ಯವಸಾಯದ ಕೆಲಸ ಮಾಡುತ್ತಿದ್ದರು. ನಮಗೆ ಜಮೀನು ಇರುವುದಿಲ್ಲ. ನಮ್ಮ ತಂದೆ ಬೇರೆಯವರಿಗೆ ಜಮೀನು ಕೊಡಿಸುವ ಕೆಲಸ ಮಾಡುತ್ತಿರಲಿಲ್ಲ. ನಮ್ಮ ಊರಿನಲ್ಲಿ ಸುಮಾರು 600 ಮನೆಗಳು ಇರುತ್ತವೆ. ಆ ಪೈಕಿ ಒಕ್ಕಲಿಗರ ಮನೆಗಳು ಸುಮಾರು 25 ಮನೆಗಳು ಇರುತ್ತವೆ ಎಂದರೆ ಸರಿ. ಬೇರೆ ಜಾತಿಯವರ ಮನೆಗಳು ಸುಮಾರು 1-2 ಮನೆಗಳು ಇರುತ್ತವೆ ಎಂದರೆ ಸರಿ. ನಮ್ಮ ಊರಿನಲ್ಲಿ ನಮ್ಮ ಜಾತಿಯವರು ಬಹುಸಂಖ್ಯಾತರು ಇರುತ್ತೇವೆ ಎಂದರೆ ಸರಿ.

14. ಶಿಡ್ಲಘಟ್ಟದ ಡಿಎಸ್‌ಎಸ್ ಸಂಘದಲ್ಲಿ ನನ್ನ ತಂದೆ ಅಧ್ಯಕ್ಷರು ಆಗಿದ್ದರು. ನಮ್ಮ ಊರಿನಲ್ಲಿ ನಮ್ಮ ತಂದೆ ಮುಖಂಡರು ಆಗಿದ್ದರು ಎಂದರೆ ಸರಿ. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನಮ್ಮ ತಂದೆ ಸ್ಪರ್ಧಿಸಿ ಸೋತಿದ್ದರು ಎಂದರೆ ಸರಿ. ಒಕ್ಕಲಿಗ ಜನಾಂಗದ ಅಭ್ಯರ್ಥಿಯ ವಿರುದ್ದ ಸ್ಪರ್ಧಿಸಿ ನನ್ನ ತಂದೆ ಸದರಿ ಚುನಾವಣೆಯಲ್ಲಿ ಸೋತಿದ್ದರು ಎಂದರೆ ಸರಿಯಲ್ಲ. 1, 2 ಹಾಗೂ 5 ನೇ ಆರೋಪಿತರು ನಮ್ಮ ಊರಿನವರಲ್ಲ ಎಂದರೆ ಸರಿ.

15. ಚಾಸಾ-2 ಮತ್ತು ಚಾಸಾ-3 ರವರು ಬಂದು, ನನ್ನ ತಂದೆ ಮರಣಹೊಂದಿದ ವಿಚಾರವನ್ನು ತಿಳಿಸಿದಾಗ, ನಾನು ಮನೆಯಲ್ಲಿ ಇದ್ದೆನು, ಆಗ ಸಮಯ ಸಂಜೆ 7.30

ಆಗಿತ್ತು. ಕೂಡಲೇ ನಾನು ಹಾಗೂ ನಮ್ಮ ಕುಟುಂಬದವರು ಅಂದರೆ ನನ್ನ ತಾಯಿ, ದೊಡ್ಡಮ್ಮ, ನನ್ನ ಸಹೋದರರು ಘಟನಾ ಸ್ಥಳಕ್ಕೆ ಹೋಗಿದ್ದೆವು. ಸಾಕ್ಷಿ ಮುಂದುವರೆದು 10 ನಿಮಿಷಗಳ ನಂತರ, ಊರಿನವರು ಘಟನಾ ಸ್ಥಳಕ್ಕೆ ಬಂದಿದ್ದರು. ನಮ್ಮ ಊರಿನಿಂದ ಘಟನಾ ಸ್ಥಳವು ಸುಮಾರು 250 ಮೀಟರ್ ದೂರದಲ್ಲಿ ಇದೆ. ಸದರಿ ಘಟನಾ ಸ್ಥಳದಲ್ಲಿ ಕೂಗಾಟವಾದರೆ ನಮ್ಮ ಊರಿಗೆ ಕೇಳಿಸುವುದಿಲ್ಲ.

16. ಘಟನಾ ಸ್ಥಳಕ್ಕೆ ಹೋದ ನಾವು ಟಾರ್ಚ್ ಹಾಕಿ ನಮ್ಮ ತಂದೆಯ ಶವವನ್ನು ನೋಡಿದ್ದೆವು. ಸದರಿ ಘಟನಾ ಸ್ಥಳದಲ್ಲಿ ಕತ್ತಲು ಇದುದ್ದರಿಂದ ನಾವು ಟಾರ್ಚ್ ಹಾಕಿ ನೋಡಿದ್ದೆವು ಎಂದರೆ ಸರಿ. ಘಟನಾ ಸ್ಥಳಕ್ಕೆ ನಮ್ಮ ಊರಿನವರು ಸುಮಾರು 200 ಜನರು ಬಂದಿದ್ದರು. ಆಗ ನಾನು ಪೊಲೀಸರಿಗೆ ಪೋನ್ ಮಾಡಿಲ್ಲ, ನಮ್ಮ ಊರಿನ ಗ್ರಾಮ ಪಂಚಾಯಿತಿ ಸದಸ್ಯರು ಆದ ರವಿ ಎನ್ನುವವರು ಪೊಲೀಸರಿಗೆ ಪೋನ್ ಮಾಡಿದ್ದರು. ಅವರು ಪೊಲೀಸರಿಗೆ ಯಾವ ಸಮಯಕ್ಕೆ ಪೋನ್ ಮಾಡಿದ್ದರು ಎಂದು ನನಗೆ ತಿಳಿದಿಲ್ಲ.

17. ದಿಬ್ಬೂರಹಳ್ಳಿ ನಮ್ಮ ಊರಿನಿಂದ ಸುಮಾರು 15 ಕಿಲೋ ಮೀಟರ್ ದೂರದಲ್ಲಿ ಇದೆ. ರಾತ್ರಿ 8.30 ಗಂಟೆ ಸಮಯದಲ್ಲಿ ಸುಮಾರು 20-30 ಜನ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು. ಸದರಿ ಪೊಲೀಸರು ನನ್ನನ್ನು ವಿಚಾರಿಸಿ, ಬರವಣಿಗೆ ಮಾಡಿಕೊಂಡಿದ್ದರು. ಸದರಿ ಪೊಲೀಸರು ಸುಮಾರು 2-3 ಗಂಟೆಗಳ ಕಾಲ

| ಪ್ರಾಸಾ | 01 |
|---|---|

ಘಟನಾ ಸ್ಥಳದಲ್ಲಿ ಇದ್ದರು. ಸದರಿ ಪೊಲೀಸರು ಘಟನಾ ಸ್ಥಳದಲ್ಲಿ ಇದ್ದ ಕನ್ನಡಕ, ಚಪ್ಪಲಿಗಳು, ಮೊಬೈಲ್ ನ್ನು ವಶಪಡಿಸಿಕೊಂಡಿದ್ದರು. ಸದರಿ ಪೊಲೀಸರು ನಮ್ಮ ತಂದೆ ನಿಲ್ಲಿಸಿದ್ದ ಓಮಿನಿ ಕಾರಿನ ಬಳಿ ತಪಾಸಣೆ ಮಾಡಿದ್ದರು. ಸದರಿ ಓಮಿನಿ ಕಾರಿನಲ್ಲಿ ಇದ್ದ ಖಾರದ ಪುಡಿಯನ್ನು ಸದರಿ ಪೊಲೀಸರು ವಶಪಡಿಸಿಕೊಂಡಿದ್ದರು. ಸದರಿ ಪೊಲೀಸರು 2-3 ಗಂಟೆಗಳ ಕಾಲ ಘಟನಾ ಸ್ಥಳದಲ್ಲಿ ಇದ್ದ ಸಮಯದಲ್ಲಿ ನಾನು ಹಾಗೂ ನಮ್ಮ ಊರಿನವರು ಅಲ್ಲಿ ಇದ್ದೆವು. ಆ ಸಮಯದಲ್ಲಿ ನಮ್ಮ ತಂದೆಯ ಶವವನ್ನು ಸದರಿ ಪೊಲೀಸರು ನೋಡಿದ ನಂತರ ಬರವಣಿಗೆ ಮಾಡಿಕೊಂಡಿಲ್ಲ. ನಮ್ಮ ತಂದೆ ನಿಲ್ಲಿಸಿದ್ದ ಓಮಿನಿ ಕಾರಿನಲ್ಲಿಯೇ ನಮ್ಮ ತಂದೆಯ ಶವವನ್ನು ಪೊಲೀಸರು ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರು. ಸದರಿ ಓಮಿನಿ ವಾಹನವನ್ನು ಪೊಲೀಸರೇ ಚಲಾಯಿಸಿಕೊಂಡು ಹೋಗಿದ್ದರು.

18. ನಾವು ಸುಮಾರು 10 ಜನರು ಸದರಿ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆವು. ಪೊಲೀಸರು ಅಲ್ಲಿಗೂ ಸಹ ಬಂದಿದ್ದರು. ಸದರಿ ಆಸ್ಪತ್ರೆಯ ಬಳಿ ನಾವು ಆ ದಿನ ರಾತ್ರಿ ಅಲ್ಲಿಯೇ ಇದ್ದೆವು. ನಮ್ಮ ತಂದೆಯ ಶವ ಪರೀಕ್ಷೆ ಆಗುವ ತನಕ ಸದರಿ ಆಸ್ಪತ್ರೆಯ ಬಳಿ ಇದ್ದು, ನಮ್ಮ ತಂದೆಯ ಶವವನ್ನು ಶವಸಂಸ್ಕಾರಕ್ಕೆ ಊರಿಗೆ ತೆಗೆದುಕೊಂಡು ಹೋಗಿದ್ದೆವು ಎಂದರೆ ಸರಿ. ಸಂಜೆ 5.30-6 ಗಂಟೆ ಸಮಯದಲ್ಲಿ ನಮ್ಮ ತಂದೆಯ ಶವವನ್ನು ನಮ್ಮ ಊರಿಗೆ ತೆಗೆದುಕೊಂಡು ಹೋಗಿ ಅಂತ್ಯ ಸಂಸ್ಕಾರ

ಮಾಡಿರುತ್ತೇವೆ.

19. ದಿನಾಂಕ 19-08-2023 ಕ್ಕಿಂತ 12 ದಿನಗಳ ಮೊದಲು 1 ನೇ ಆರೋಪಿಯು ಮದ್ಯಪಾನ ಮಾಡಿ ದ್ವಿಚಕ್ರ ವಾಹನದಲ್ಲಿ 6 ನೇ ಆರೋಪಿ ಹಾಗೂ ಚಾಸಾ-8 ರವರ ಮನೆಯ ಬಳಿ ಬಂದು, 6 ನೇ ಆರೋಪಿಯು ಮಲಗಿದ್ದಾಗ ಹಾರ್ನ್ ಮಾಡಿದ್ದನು ಎಂದು, ಆಗ ಚಾಸಾ-8 ರವರು 1 ನೇ ಆರೋಪಿಗೆ ಏಕೆ ಹಾರ್ನ್ ಮಾಡುತ್ತಿದ್ದೀಯಾ ಎಂದು ಕೇಳಿದರು ಎಂದು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

20. ಘಟನೆ ಆದ ಮರುದಿನ ನಾನು ಪೊಲೀಸರಿಗೆ ದೂರು ನೀಡಿದ್ದೆನು. ಆನಂದಪ್ಪರವರ ರೇಷ್ಮೆ ಹುಳು ಮನೆಯ ಬಳಿ ಮಾಡಲಾಗಿದೆ ಎಂದು ಹೇಳಲಾದ ಪಂಚಾಯಿತಿಗೆ ನಾನು ಹೋಗಿಲ್ಲ. ಸದರಿ ಪಂಚಾಯಿತಿಯಲ್ಲಿ ಏನು ಮಾತುಕತೆ ಆಗಿತ್ತು ಎಂದು ನನಗೆ ತಿಳಿದಿಲ್ಲ ಎಂದರೆ ಸರಿ. ದಿಬ್ಬೂರಹಳ್ಳಿ ಪೊಲೀಸ್ ಠಾಣೆಯ ಬಳಿ ನಡೆದಿದೆ ಎಂದು ಹೇಳಲಾದ ಪಂಚಾಯಿತಿ ಸಮಯದಲ್ಲಿ ನಾನು ಇರಲಿಲ್ಲ. ಅಲ್ಲಿ ಏನು ಮಾತುಕತೆ ನಡೆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಮ್ಮ ತಂದೆಗೂ, 1 ನೇ ಆರೋಪಿಗೂ ದಿಬ್ಬೂರಹಳ್ಳಿ ಪೊಲೀಸ್ ಠಾಣೆಯ ಬಳಿ ಪಂಚಾಯಿತಿ ನಡೆದಾಗ ಗಲಾಟೆ ಆಗಿತ್ತು ಎಂದು ದೂರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಗೂಂಡಾ ವ್ಯಕ್ತಿಗಳೊಂದಿಗೆ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ನಮ್ಮ ತಂದೆಗೆ ರಸ್ತೆಯಲ್ಲಿ ಅಡ್ಡ ಹಾಕಿದ್ದನು ಎಂದು, ನಮ್ಮ ತಂದೆ ತಪ್ಪಿಸಿಕೊಂಡು ಬಂದರು ಎಂದು

| ಪ್ರಾಸಾ | 01 |
|---|---|

ದೂರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ಬೆಳಿಗ್ಗೆ 7 ಗಂಟೆ ಸಮಯದಲ್ಲಿ ನಮ್ಮ ತಂದೆ ಶಿಡ್ಲಘಟ್ಟಕ್ಕೆ ಹೋಗಿದ್ದಾಗ 1ನೇ ಆರೋಪಿ ಪೋನ್ ಕರೆ ಮಾಡಿ, ಕೊಲೆ ಬೆದರಿಕೆ ಹಾಕಿದ್ದನು ಎಂದು, ಒಂದು ದಿನದ ನಂತರ ವೇಣು ಎಂಬ ವ್ಯಕ್ತಿಯ ಮೂಲಕ 1ನೇ ಆರೋಪಿ ನನ್ನ ತಂದೆಗೆ ಕೊಲೆ ಬೆದರಿಕೆ ಹಾಕಿಸಿದ್ದನು ಎಂದು ದೂರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ನಂತರ ವೇಣು ಗೋಪಾಲ್ ಮೂಲಕ 1ನೇ ಆರೋಪಿಯು ಪೋನ್ ಮಾಡಿಸಿ, ಜಮೀನನ್ನು ಮಾರಾಟ ಮಾಡಿಸಿಕೊಡಬೇಕು ಎಂದು ಹೇಳಿಸಿದ್ದನು ಎಂದು, ಸದರಿ ವೇಣು ಗೋಪಲ್ ಮೂಲಕ 1ನೇ ಆರೋಪಿಯು ಸುಮಾರು 50 ಪೋನ್ ಕರೆಗಳನ್ನು ಮಾಡಿಸಿದ್ದನು ಎಂದು, ನಮ್ಮ ತಂದೆ ಕರೆ ಸ್ವೀಕರಿಸದೇ ಇದುದ್ದರಿಂದ ನಾಗೇಶ್ ರವರು ನನ್ನ ತಂದೆಯನ್ನು ಹಿಂಬಾಲಿಸುವಂತೆ 1ನೇ ಆರೋಪಿ ಅವರಿಗೆ ಹೇಳಿದ್ದನು ಎಂದು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

21. ದ್ಯಾವಪ್ಪನ ಗುಡಿಗೂ, ಸುರೇಶ್ ರವರ ಜಮೀನಿಗೂ ಸುಮಾರು ಅರ್ಧ ಕಿಲೋ ಮೀಟರ್ ದೂರ ಇದೆ. ನಾಗೇಶ ನಮ್ಮ ತಂದೆಯ ಓಮಿನಿ ಕಾರನ್ನು ಹಿಂಬಾಲಿಸಿ ನಮ್ಮ ಊರಿನ ದ್ಯಾವಪ್ಪನ ಗುಡಿ ಬಳಿ ತನ್ನ ವಾಹನವನ್ನು ನಿಲ್ಲಿಸಿ ನಮ್ಮ ತಂದೆಯ ವಾಹನದ ಬಳಿಗೆ ಓಡಿ ಬಂದಿದ್ದನು ಎಂದು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಓಮಿನಿ ವಾಹನವನ್ನು ಚಲಾಯಿಸಿಕೊಂಡು ಮುಂದೆ ಬಂದಾಗ, ವೇಣು ಗೋಪಾಲ್ ನಮ್ಮ ತಂದೆಯ ವಾಹನವನ್ನು ಪಕ್ಕಕ್ಕೆ ಹಾಕಿಸಿದನು ಎಂದು, ನಂತರ ಸದರಿ

ವೇಣು ಗೋಪಾಲ್ ನಮ್ಮ ತಂದೆಯ ಮೇಲೆ ಖಾರದ ಪುಡಿ ಎರಚಿದನು ಎಂದು ದೂರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ಆಗ 1, 2, 4 ನೇ ಆರೋಪಿತರು ನನ್ನ ತಂದೆಯನ್ನು ಸುತ್ತುವರಿದಿದ್ದರೆಂದು, ನನ್ನ ತಂದೆ ತಪ್ಪಿಸಿಕೊಂಡು ಓಡಿ ಹೋಗಲು ಪ್ರಯತ್ನಿಸಿದಾಗ 1 ನೇ ಆರೋಪಿಯು ಮಚ್ಚಿನಿಂದ ನಮ್ಮ ತಂದೆಯ ಕಾಲಿಗೆ ಹೊಡೆದನು ಎಂದು ದೂರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಓಡಲು ಸಾಧ್ಯವಾಗದೇ ಇದ್ದಾಗ, 1 ನೇ ಆರೋಪಿಯು ಮಚ್ಚಿನಿಂದ ನಮ್ಮ ತಂದೆಯ ಕುತ್ತಿಗೆಗೆ ಹೊಡೆದನು ಎಂದು ಹಾಗೂ 2 ನೇ ಆರೋಪಿಯು ಚಾಕುವಿನಿಂದ ನಮ್ಮ ತಂದೆಯ ಹೊಟ್ಟೆಗೆ ತಿವಿದಿದ್ದನು ಎಂದು ದೂರಿನಲ್ಲಿ ನಾನು ಬರೆಯಿಸಿಲ್ಲ ಎಂದರೆ ಸರಿಯಲ್ಲ. ಸ್ವಲ್ಪ ಮುಂದೆ ನನ್ನ ತಂದೆ ಬಂದಾಗ, 1 ನೇ ಆರೋಪಿಯು, ಇನ್ನೂ ನನ್ನ ತಂದೆ ಉಸಿರಾಡುತ್ತಿದ್ದಾರೆ ಎಂದು ಮಚ್ಚಿನಿಂದ ನನ್ನ ತಂದೆಗೆ ಹೊಡೆದಿದ್ದನು ಎಂದು ದೂರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ.

22. ಸದರಿ ಸಮಯದಲ್ಲಿ ನಮ್ಮ ಮಾವಂದಿರಾದ ಚಾಸಾ-2 ಮತ್ತು ಚಾಸಾ-3 ರವರು ದ್ವಿಚಕ್ರ ವಾಹನದಲ್ಲಿ ಬಂದರು ಎಂದು, ಅವರು ನಮ್ಮ ತಂದೆಯ ಓಮಿನಿ ಕಾರನ್ನು ನೋಡಿ, ಪರಿಶೀಲನೆ ಮಾಡಿದಾಗ ಒಂದು ಚಪ್ಪಲಿ ಬಿದ್ದಿರುವುದನ್ನು ನೋಡಿರುವುದನ್ನು, ನಂತರ ಸದರಿಯವರು ಟಾರ್ಚ್ ಹಾಕಿ ನೋಡಿ, ನಮ್ಮ ತಂದೆಯ ಶವವನ್ನು ನೋಡಿ, ನಂತರ ನಮ್ಮ ಮನೆಗೆ ಬಂದು, ಸದರಿ ವಿಚಾರವನ್ನು ತಿಳಿಸಿದರು

ಎಂದು ನಾನು ದೂರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ನಂತರ ನಾನು ದಿಬ್ಬೂರಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

23. ಮರುದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದು, ಮು.ಮಾ.1 ರಿಂದ 11 ವಸ್ತುಗಳನ್ನು ವಶಪಡಿಸಿಕೊಂಡು, ಪಂಚನಾಮೆ ಮಾಡಿಕೊಂಡು, ಸ್ಥಳದಲ್ಲಿ ನನ್ನ ಸಹಿ ಪಡೆದುಕೊಂಡರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ಮರುದಿನ ಬೆಳಿಗ್ಗೆ ಸ್ಥಳಕ್ಕೆ ಬಂದಿದ್ದಾಗ ಬರವಣಿಗೆ ಮಾಡಿಕೊಂಡಿದ್ದರು. ಸದರಿ ಬರವಣಿಗೆಗೆ ನಾನು ಸಹಿ ಹಾಕಿದ್ದೇನೆ ಎಂದರೆ ಸರಿ. ಮರುದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ನಮ್ಮ ಊರಿನವರು ಸುಮಾರು 10 ಜನರು ಇದ್ದೆವು. ಸದರಿ ಸಮಯದಲ್ಲಿ ಬೇರೆ ಯಾರು ಘಟನಾ ಸ್ಥಳದಲ್ಲಿ ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಹಾಕಬೇಕು ಎಂದು ನಮ್ಮ ಬಳಿ ಹೇಳಿಲ್ಲ, ನಾವೇ ಸದರಿ ಘಟನಾ ಸ್ಥಳದಲ್ಲಿ ಸಹಿ ಹಾಕಿದ್ದೆವು. ಸದರಿ ಘಟನಾ ಸ್ಥಳದಲ್ಲಿ ಹಾಜರು ಇದ್ದ ನಮ್ಮ ಊರಿನ ಇತರ ವ್ಯಕ್ತಿಗಳ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ಸುರೇಶ್ ರವರ ಜಮೀನಿನ ಎರಡು ದಿಕ್ಕುಗಳಲ್ಲಿ ರಸ್ತೆ ಇದೆ ಎಂದರೆ ಸರಿ. ಅವುಗಳಲ್ಲಿ ಒಂದು ರಸ್ತೆಯು ದ್ಯಾವಪ್ಪನ ಗುಡಿ ಕಡೆಯಿಂದ ನಮ್ಮ ಊರಿಗೆ ಬರುವ ರಸ್ತೆಯಾಗಿರುತ್ತದೆ, ಇನ್ನೊಂದು ರಸ್ತೆಯು ಸದರಿ ರಸ್ತೆಯಿಂದ ಆನಂದಪ್ಪರವರ ರೇಷ್ಮೆಹುಳು ಮನೆಯ ಕಡೆಗೆ ಹೋಗುವ ರಸ್ತೆ ಆಗಿರುತ್ತದೆ

ಎಂದರೆ ಸರಿ. ಆನಂದಪ್ಪರವರ ರೇಷ್ಮೆಹುಳು ಮನೆಯ ನಂತರದಲ್ಲಿ ಸದರಿ ರಸ್ತೆಯು ಮುಂದುವರೆದು ಹೋಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ರಸ್ತೆಯು ಆನಂದಪ್ಪರವರ ರೇಷ್ಮೆ ಹುಳು ಮನೆಯ ತನಕ ಮಾತ್ರ ಇರತ್ತದೆ ಎಂದು ಹೇಳುತ್ತಾರೆ. ನಿಪಿ 2 ಪಂಚನಾಮೆಗೆ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

24. ಆನಂದಪ್ಪರವರ ರೇಷ್ಮೆ ಹುಳು ಮನೆಯ ಬಳಿಗೆ ಆ ದಿನ ನಾನು ಹಾಗೂ ಪೊಲೀಸರು ಮಾತ್ರ ಹೋಗಿದ್ದೆವು. ಸದರಿ ಸಮಯದಲ್ಲಿ ಪೊಲೀಸರು ಬರವಣಿಗೆ ಮಾಡಿದ್ದರು, ನಾನು ಅಲ್ಲಿ ಸಹಿ ಹಾಕಿದ್ದೆನು ಎಂದರೆ ಸರಿ. ಸದರಿ ಬರವಣಿಗೆಗೆ ಬೇರೆ ಯಾರು ಸಹಿ ಮಾಡಿದರು ಎಂದು ನನಗೆ ತಿಳಿದಿಲ್ಲ ಎಂದರೆ ಸರಿ. ನಿಪಿ 7 ರಲ್ಲಿರುವ ಸಹಿಯನ್ನು ನಾನು ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ ಘಟನಾ ಸ್ಥಳದಲ್ಲಿ ಹಾಗೂ ಆನಂದಪ್ಪರವರ ರೇಷ್ಮೆ ಹುಳು ಮನೆಯ ಬಳಿ ಯಾವುದೇ ಪೋಟೋಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಂತರದಲ್ಲಿ ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿ ಸದರಿ ಸ್ಥಳದಲ್ಲಿ ಪೋಟೋಗಳನ್ನು ತೆಗೆಯಿಸಿಕೊಂಡಿದ್ದರು ಎಂದರೆ ಸರಿಯಲ್ಲ.

25. 12 ದಿನಗಳ ನಂತರ ನಾನು ಸ್ವತಃ ಪೊಲೀಸ್ ಠಾಣೆಗೆ ಹೋಗಿದ್ದೆನು, ಪೊಲೀಸರು ಬಾ ಎಂದು ಕರೆದಿರಲಿಲ್ಲ. ನಮ್ಮ ತಂದೆಯನ್ನು ಕೊಲೆ ಮಾಡಲು 6 ನೇ ಆರೋಪಿಯು 1 ನೇ ಆರೋಪಿಗೆ ಕುಮ್ಮಕ್ಕು ನೀಡಿದ್ದಳೆಂದು ನಮ್ಮ ಪಕ್ಕದ

| ಪ್ರಾಸಾ | 01 |
|---|---|

ಮನೆಯವರಾದ ಅಲುವೇಲಮ್ಮ ನಮಗೆ ಹೇಳಿದ್ದರು. ಸದರಿ ಕುಮ್ಮಕ್ಕು ಕೊಟ್ಟಿರುವ ವಿಚಾರ ಅಲ್ಲದೇ ಘಟನೆ ಬೇರೆ ವಿಚಾರಗಳನ್ನು ಸಹ ಪೊಲೀಸರಿಗೆ ಆ ದಿನ ಹೇಳಿದ್ದೆನು. ಆ ದಿನ 1 ನೇ ಆರೋಪಿ ಹಾಗೂ 6 ನೇ ಆರೋಪಿಯ ನಡುವೆ ಅಕ್ರಮ ಸಂಬಂಧವಿತ್ತು ಎಂದು ಸಹ ಪೊಲೀಸರಿಗೆ ಹೇಳಿರುತ್ತೇನೆ. ಸದರಿ ವಿಚಾರವನ್ನು ಹೊರತುಪಡಿಸಿ ಬೇರೆ ವಿಚಾರ ಹೇಳಿಲ್ಲ. ಘಟನೆಯಾದ 12 ದಿನಗಳ ನಂತರ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ಅಲ್ಲಿ ನೀಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಹಾಗೂ 6 ನೇ ಆರೋಪಿಯ ನಡುವೆ ಅಕ್ರಮ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತರ ನಡುವಿನ ಅಕ್ರಮ ಸಂಬಂಧವನ್ನು ನಾನು ಖುದ್ದಾಗಿ ನೋಡಿಲ್ಲ. ಸದರಿ ಅಕ್ರಮ ಸಂಬಂಧದ ವಿಚಾರವನ್ನು ಪೊಲೀಸರು ನಮಗೆ ತಿಳಿಸಿದ್ದರು.

26. ದಿನಾಂಕ 19-08-2023 ಕ್ಕಿಂತ 12 ದಿನಗಳ ಮೊದಲು ಚಾಸಾ-8 ಹಾಗೂ 1 ನೇ ಆರೋಪಿಗೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-8 ರವರು ಸದರಿ ಗಲಾಟೆಯ ವಿಚಾರವನ್ನು ನನ್ನ ತಂದೆಗೆ ತಿಳಿಸಿಲ್ಲ ಹಾಗೂ ನನ್ನ ತಂದೆ ದೂರು ನೀಡುವಂತೆ ಚಾಸಾ-8 ರವರಿಗೆ ಸಲಹೆ ನೀಡಿಲ್ಲ ಎಂದರೆ ಸರಿಯಲ್ಲ. ಆನಂದಪ್ಪರವರ ರೇಷ್ಮೆ ಹುಳು ಮನೆಯ ಬಳಿ ಅಥವಾ ದಿಬ್ಬೂರಹಳ್ಳಿ ಪೊಲೀಸ್ ಠಾಣೆಯ ಬಳಿ ಯಾವುದೇ ಪಂಚಾಯಿತಿ ಆಗಿಲ್ಲ ಹಾಗೂ 1 ನೇ ಆರೋಪಿಯು ನನ್ನ ತಂದೆಗೆ ಬೆದರಿಕೆ

ಹಾಕಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ 6 ನೇ ಆರೋಪಿಯು ನನ್ನ ತಂದೆಯನ್ನು ಸಾಯಿಸುವಂತೆ ಕುಮ್ಮಕ್ಕು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ, ನನ್ನ ತಂದೆಯ ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿತರ ಮೇಲಿನ ದ್ವೇಷದಿಂದ ಪೊಲೀಸರು ಹೇಳಿಕೊಟ್ಟಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 5 ನೇ ಆರೋಪಿತರ ಪರ ಶ್ರೀ ಕೆ ಎಂ ಎಂ ವಕೀಲರಿಂದ:**

ಕುಮಾರಿ ಇ ವಿ ವಕೀಲರು ಶ್ರೀ ಕೆ ಎಂ ಎಂ ವಕೀಲರ ಪರ, 1 ರಿಂದ 4 ನೇ ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರುತ್ತಾರೆ. ಅವರ ಕೋರಿಕೆಯನ್ನು ಮನ್ನಿಸಿದೆ.

**ಪಾಟೀ ಸವಾಲು: 6 ನೇ ಆರೋಪಿತರ ಪರ ಶ್ರೀ ಹೆಚ್ ಸಿ ಪಿ ವಕೀಲರಿಂದ:**

27. ಚಾಸಾ-8 ಹಾಗೂ ನನ್ನ ತಂದೆಯ ತಾಯಿ, ಅಣ್ಣ-ತಂಗಿ ಎಂದರೆ ಸರಿ. 6 ನೇ ಆರೋಪಿಗೆ ಆಕೆಯ ತವರು ಮನೆ ಇರುವ ಕೋಡಿಹಳ್ಳಿ, ಬೆಂಗಳೂರಿನಲ್ಲಿ ಮಕ್ಕಳು ಜನಿಸಿದ್ದರು ಎಂದರೆ ಗೊತ್ತಿಲ್ಲ. 6 ನೇ ಆರೋಪಿಯು ತನ್ನ ಮಕ್ಕಳೊಂದಿಗೆ ತನ್ನ ತವರು ಮನೆಯಲ್ಲಿ ಇದ್ದಳು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಹಾಗೂ ದೊಡ್ಡಮ್ಮ ನಡುವೆ ಹೊಂದಾಣಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ, ನಮ್ಮ ದೊಡ್ಡಮ್ಮ

| ಪ್ರಾಸಾ | 01 |
|---|---|

ಚಾಸಾ-5 ರವರ ಮನೆಯಲ್ಲಿ ಇರುತ್ತಿದ್ದರು ಎಂದರೆ ಸರಿ. ನಮ್ಮ ಸಂಸಾರಕ್ಕೆ ನಮ್ಮ ತಂದೆ ಏನನ್ನು ತಂದು ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ, ನಮ್ಮ ಮನೆಗೆ ಏನು ತಂದು ಹಾಕುತ್ತಿಲ್ಲವೆಂದು ನನ್ನ ತಾಯಿ ಚಾಸಾ-5 ರವರೊಂದಿಗೆ ಜಗಳವಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ನಮ್ಮ ತಂದೆ, ನಮ್ಮ ತಾಯಿ ಹಾಗೂ ಚಾಸಾ-5 ರವರಿಗೆ ಬುದ್ಧಿವಾದ ಹೇಳಿದಾಗ ಅವರಿಬ್ಬರೂ ನಮ್ಮ ತಂದೆಯ ಮೇಲೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ-8, ಅವರ ತಂದೆ ಹಾಗೂ 6 ನೇ ಆರೋಪಿಯು ನಮ್ಮ ಊರಿಗೆ ಬಂದಿದ್ದಾಗ ನಮ್ಮ ತಾಯಿ ಹಾಗೂ ಚಾಸಾ-5 ರವರಿಗೆ ಬುದ್ಧಿವಾದ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ಸದರಿ ಚಾಸಾ-8, ಅವರ ತಂದೆ ಹಾಗೂ 6 ನೇ ಆರೋಪಿಯ ಮೇಲೆ ನಾವು ಗಲಾಟೆ ಮಾಡಿದ್ದೆವು ಎಂದರೆ ಸರಿಯಲ್ಲ. ನಂತರ ಚಾಸಾ-8, 6 ನೇ ಆರೋಪಿಯ ಮೇಲೆ ನಮಗೆ ದ್ವೇಷವಿತ್ತು ಎಂದರೆ ಸರಿಯಲ್ಲ. ಸದರಿ ದ್ವೇಷದ ಕಾರಣದಿಂದ 6 ನೇ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ, ಶ್ರೀ ಹೆಚ್ ಸಿ ಪಿ ವಕೀಲರು, *1* ರಿಂದ *4* ನೇ ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರುತ್ತಾರೆ. ಅವರ ಕೋರಿಕೆಯನ್ನು ಮನ್ನಿಸಿದೆ.

| ಪ್ರಾಸಾ | 01 |
| --- | --- |

**ಮರುವಿಚಾರಣೆ: ಇಲ್ಲ.**

**(ದಿನಾಂಕ: 12.07.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಶಿವಪ್ರಸಾದ್.ಕೆ.ಬಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**